# ಕನ್ನಡ ಸಾಹಿತ್ಯ ಪರಿಷತ್ತು

***ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು – ೫೬೦ ೦೧೮***

***ಸ್ಥಾಪನೆ : ೧೯೧೫*** ***ದೂರವಾಣಿ : ೨೬೬೧೨೯೯೧ ೨೬೬೨೩೫೮೪***

***೨೨೪೨೩೮೬೭(ಫ್ಯಾಕ್ಸ್)***

Email : Kannadaparishattu@gmail.com http://www.kasapa.in

***ಡಾ. ಮನು ಬಳಿಗಾರ್***

**ಅಧ್ಯಕ್ಷರು**


ಕ್ರಮಸಂಖ್ಯೆ : ಕಸಾಪ/ಪ್ರಕವಿ/ಪುಸ್ತಕ ದತ್ತಿ/೨೦೧೭–೧೮

ದಿನಾಂಕ : ೦೩–೧೦–೨೦೧೭

## ಪತ್ರಿಕಾ ಪ್ರಕಟಣೆ

## ಪುಸ್ತಕ ದತ್ತಿಗಳ ಪ್ರಕಟಣೆಗೆ ಹಸ್ತಪ್ರತಿಗಳ ಆಹ್ವಾನ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೆಲವು ಸಂಘ ಸಂಸ್ಥೆಗಳು, ದಾನಿಗಳು ಮತ್ತು ಮಠಾಧೀಶರು ದತ್ತಿನಿಧಿಗಳನ್ನು ಸ್ಥಾಪಿಸಿರುತ್ತಾರೆ. ಇಂತಹ ದತ್ತಿನಿಧಿಯಿಂದ ಅರ್ಜಿತವಾಗುವ ಬಡ್ಡಿ ಹಣದಿಂದ ದಾನಿಗಳ ಆಶಯಕ್ಕನುಗುಣವಾಗಿ ವಿವಿಧ ವಿಷಯಗಳನ್ನೊಳಗೊಂಡ ಪುಸ್ತಕಗಳನ್ನು ಮುದ್ರಣ ಮಾಡಲಾಗುತ್ತಿದೆ.

ಪ್ರಸ್ತುತ **೨೦೧೭–೧೮ನೇ** ಸಾಲಿನಲ್ಲಿ ಈ ಕೆಳಕಂಡ ಪುಸ್ತಕ ದತ್ತಿಗಳ ಆಶ್ರಯದಲ್ಲಿ ಒಂದೊಂದು ಪುಸ್ತಕವನ್ನು ಪ್ರಕಟಿಸಲಿದ್ದು, ಅದಕ್ಕಾಗಿ ಪರಿಷತ್ತು ಹಸ್ತಪ್ರತಿಗಳನ್ನು ಆಹ್ವಾನಿಸಿದೆ. **ಹಸ್ತಪ್ರತಿಗಳು ಫುಲ್‌ಸ್ಕೇಪ್ ಅಳತೆಯಲ್ಲಿ ೧೦೦ ರಿಂದ ೧೫೦ ಪುಟಗಳ ಮಿತಿಯಲ್ಲಿರಬೇಕು.** ಮರುಮುದ್ರಣ ಪುಸ್ತಕಗಳಿಗೆ ಅವಕಾಶವಿರುವುದಿಲ್ಲ. ಹಸ್ತಪ್ರತಿಗಳ ಆಯ್ಕೆಯಲ್ಲಿ ಪರಿಷತ್ತು ನಿಯೋಜಿಸುವ ತೀರ್ಪುಗಾರರ ತೀರ್ಮಾನವೇ ಅಂತಿಮ. ಆಯ್ಕೆಯಾದ ಹಸ್ತಪ್ರತಿಗಳನ್ನು ಮುದ್ರಿಸಿ ಲೇಖಕರಿಗೆ ಮುದ್ರಿತ ಪುಸ್ತಕಗಳನ್ನು ಮತ್ತು ಗೌರವ ಸಂಭಾವನೆಯನ್ನು ಪರಿಷತ್ತಿನ ನಿಯಮದಂತೆ ನೀಡಲಾಗುವುದು. ಆಸಕ್ತರು ದತ್ತಿದಾನಿಗಳ ಆಶಯಕ್ಕನುಗುಣವಾಗಿರುವ ಹಸ್ತಪ್ರತಿಗಳನ್ನು ಆಯಾ ದತ್ತಿ ಹೆಸರನ್ನು ನಮೂದಿಸಿ, ಪ್ರತ್ಯೇಕವಾಗಿ **ದಿನಾಂಕ ೧೭–೧೧–೨೦೧೭ ರೊಳಗೆ** "ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮" ಇವರಿಗೆ ಕಳುಹಿಸಬೇಕು.

**ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ ೨೬೬೨೩೫೮೪ ಯಲ್ಲಿ ಸಂಪರ್ಕಿಸಬಹುದಾಗಿದೆ.**

| ದತ್ತಿ ಹೆಸರು | ವಿಷಯ |
|---|---|
| ೧. ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ವಚನ ಸಾಹಿತ್ಯ ದತ್ತಿನಿಧಿ – ಸಿರಿಗೆರೆ | ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಸಂಬಂಧಿಸಿದ ಕೃತಿ |
| ೨. ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯುಬಿಲಿ ದತ್ತಿನಿಧಿ | ಬ್ಯಾಂಕಿಂಗ್, ಸಹಕಾರ ವಿಷಯಕ್ಕೆ ಸಂಬಂಧಿಸಿದ ಕೃತಿ |
| ೩. ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ–ಚಿತ್ರದುರ್ಗ | ಶರಣರ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿ |
| ೪. ಕಾವೇರಿ ಕನ್ನಡ ಸಾಂಸ್ಕೃತಿಕ ಸಂಘ–ಅಮೆರಿಕಾ ದತ್ತಿನಿಧಿ | ಕನ್ನಡ ಸಾಹಿತ್ಯದ ಯಾವುದೇ ಪ್ರಕಾರಕ್ಕೆ ಸಂಬಂಧಿಸಿದ ಅತ್ಯುತ್ತಮ ಕೃತಿ |
| ೫. ಪಿ.ಇ.ಎಸ್. ವಿದ್ಯಾಸಂಸ್ಥೆ– ಪ್ರೊ. ಎಂ.ಆರ್. ದೊರೆಸ್ವಾಮಿ ದತ್ತಿನಿಧಿ | ವಿಜ್ಞಾನಕ್ಕೆ ಸಂಬಂಧಿಸಿದ ಕೃತಿ |
| ೬. ಜಗದ್ಗುರು ರಂಭಾಪುರಿ ಮಠ, ಬಾಳೇಹೊನ್ನೂರು | ವೀರಶೈವ ಧರ್ಮದ ಪ್ರಾಚೀನತೆ, ಪರಂಪರೆಗೆ ಸಂಬಂಧಿಸಿದ ಕೃತಿ |
| ೭. ಡಾ. ರಾಜಕುಮಾರ್ ದತ್ತಿ | ಚಲನಚಿತ್ರ, ಕಲೆಗೆ ಸಂಬಂಧಿಸಿದ ಕೃತಿ |
| ೮. ಶ್ರೀ ಬಿ.ಟಿ.ಲಕ್ಷ್ಮಣ್ ದತ್ತಿ | ಗ್ರಾಮೀಣ ಬದುಕು, ಕೃಷಿ, ಸಂಸ್ಕೃತಿ, ಜನಜೀವನ, ಪಶುಪಾಲನೆ, ಸ್ವಚ್ಛತೆಗೆ ಸಂಬಂಧಿಸಿದ ಕೃತಿ |
| ೯. ದಿ ಯೇನಪೋಯ ಮೊಹಿದ್ದೀನ್ ಕುನ್ಹಿ ದತ್ತಿ | ಮುಸ್ಲಿಂ ಲೇಖಕರೊಬ್ಬರು ಕನ್ನಡದಲ್ಲಿ ಬರೆದಿರುವ ಉತ್ತಮ ಕೃತಿ |

*(ಡಾ. ಮನು ಬಳಿಗಾರ್)*

ಅಧ್ಯಕ್ಷರು

***ಪ್ರಕಟಣೆಯ ಕೃಪೆಗಾಗಿ –***

ಸುದ್ದಿ ಸಂಪಾದಕರು